**<u>ಓ.ಎಸ್. ನಂ. 407/2017 ಪಿ.ಡಬ್ಲ್ಯೂ-1 ಹೆಸರು - ಆರ್ ಟಿ ಉಮಾ ಶ್ರೀನಿವಾಸ್</u>**

**ಸಾಕ್ಷಿಯನ್ನು ದಿನಾಂಕಃ 25.08.2022 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಶ್ರೀ. ಎ ಪಿ ಎಂ ಬಿ ವಕೀಲರಿಂದಃ-</u>**

ನಾನು ದಾವಾ ಅನುಸೂಚಿತ ಸ್ವತ್ತನ್ನು ವೆಂಕಟೇಶ ಶೆಟ್ಟಿರವರ ಮಗ ಮಹದೇವ ಶೆಟ್ಟಿರವರಿಂದ ಖರೀದಿಸಿರುತ್ತೇನೆ ಎಂದರೆ ಸರಿ. ಸದರಿ ಸ್ವತ್ತು ವೆಂಕಟಶೆಟ್ಟಿರವರ ಪಿತ್ರಾರ್ಜಿತ ಸ್ವತ್ತು. ನಾನು ದಾವಾ ಸ್ವತ್ತನ್ನು ಖರೀದಿಸುವ ಕಾಲಕ್ಕೆ ಸದರಿ ಸ್ವತ್ತಿನ ಕುರಿತು ವಿವಾದ ಇದ್ದ ಬಗ್ಗೆ ಅಥವಾ ನ್ಯಾಯಾಲಯದಲ್ಲಿ ದಾವೆ ಇರುವ ಕುರಿತು ಗೊತ್ತಿರಲಿಲ್ಲ. ದಾವೆಯನ್ನು ಸಲ್ಲಿಸಿದ ನಂತರ ಗೊತ್ತಾಗಿರುತ್ತದೆ. ನಾನು ದಾವಾ ಸ್ವತ್ತನ್ನು ಖರೀದಿಸಿದ ನಂತರದಲ್ಲಿ ನ್ಯಾಯಾಲಯದಲ್ಲಿ ದಾವೆ ಇರುವ ಕುರಿತು ತಿಳಿಯಿತು. ಸದರಿ ವಿಚಾರವನ್ನು ನಾನು ವಾದ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ. ಮಹದೇವಶೆಟ್ಟಿರವರ ತಂದೆಯಾದ ವೆಂಕಟಶೆಟ್ಟಿರವರು ದಾವಾ ಸ್ವತ್ತಿನ ಕುರಿತಾಗಿ ಪ್ರತಿವಾದಿ ವಿರುದ್ದ ದಾವೆಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ವೆಂಕಟಶೆಟ್ಟಿರವರು ಅಸಲು ದಾವಾ ಸಂಖ್ಯೆ 118/2011 ರಂತೆ ಪ್ರತಿವಾದಿ ವಿರುದ್ದ ನಂಜನಗೂಡಿನ 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯನ್ನು ನಾನು ಖರೀದಿಸಿರುವ ಸ್ವತ್ತಿನ ಕುರಿತಾಗಿ ಮಾಲಿಕತ್ವದ ಹಕ್ಕನ್ನು ಘೋಷಿಸುವಂತೆ ಕೋರಿ ಸಲ್ಲಿಸಿದ್ದರು ಎಂದರೆ ಸರಿ. ದಾವಾ ಸ್ವತ್ತು ವೆಂಕಟಶೆಟ್ಟಿರವರ ಪಿತ್ರಾರ್ಜಿತ ಸ್ವತ್ತಲ್ಲ, ಬದಲಾಗಿ ದಿನಾಂಕ 07.03.1967 ರಂದು ಕ್ರಯಕ್ಕೆ ಪಡೆದಿರುವಂತಹ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ. ವೆಂಕಶೆಟ್ಟಿರವರು ಅಸಲು ದಾವಾ ಸಂಖ್ಯೆ 118/2011 ನ್ನು ನಾಗಮ್ಮ, ವೆಂಕಟೇಶ, ಗುರುಸ್ವಾಮಿ ಮತ್ತು ಕಾವೇರಿರವರ ವಿರುದ್ದ ಸಲ್ಲಿಸಿದ್ದರು ಎಂದರೆ ಗೊತ್ತಿಲ್ಲ. ನಾನು ಈ ದಾವೆಯನ್ನು ವೆಂಕಟೇಶರವರ ವಿರುದ್ದ ಮಾತ್ರ ಸಲ್ಲಿಸಿದ್ದೇನೆ ಎಂದರೆ ಸರಿ. ಸಾಕ್ಷಿಗೆ ಒಂದು ಛಾಯಾ ಚಿತ್ರವನ್ನು ತೋರಿಸಲಾಗಿ ಸದರಿ ಛಾಯಾ ಚಿತ್ರದಲ್ಲಿರುವವರು ಪ್ರತಿವಾದಿ ಎಂದು, ಅವರು ನಿಂತಿರುವ ಮನೆಯು ಪ್ರತಿವಾದಿಗೆ ಸೇರಿದ್ದು ಎಂದು ಆದರೆ ಪ್ರತಿವಾದಿ ಒತ್ತುವರಿ ಮಾಡಿಕೊಂಡಿದ್ದಾರೆ ಎಂದು ಹೇಳಿರುತ್ತಾರೆ. ಸಾಕ್ಷಿಗೆ ತೋರಿಸಿದ ಛಾಯಾ ಚಿತ್ರವನ್ನು ನಿಡಿ 1 ಎಂದು ಗುರುತಿಸಲಾಯಿತು. ನಿಡಿ 1 ಛಾಯಾ ಚಿತ್ರದಲ್ಲಿರುವ ಹಸಿರು ಬಣ್ಣದಿಂದ ಕೂಡಿರುವ ಮುಳ್ಳುತಂತಿಯಿಂದ ಕೂಡಿರುವ ಆಚೆಗಿನ ಜಾಗ ಹಾಗೂ ಈಚೆಗೆ ಇರುವ ಜಾಗ ಎರಡೂ ಕೂಡ ನನಗೆ ಸೇರಿರುತ್ತದೆ. ಪ್ರತಿವಾದಿ ನನಗೆ ಸೇರಿದ ಸ್ವತ್ತನ್ನು ಒತ್ತುವರಿ ಮಾಡಿದ್ದಾರೆಂದು ಗ್ರಾಮ ಪಂಚಾಯಿತಿರವರಿಗೆ ದೂರನ್ನು ನೀಡಿರುತ್ತೇನೆ. ಸದರಿ ದೂರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ನಮ್ಮ ಸ್ವತ್ತಿನ ಅಕ್ಕಪಕ್ಕದಲ್ಲಿ ಪ್ರತಿವಾದಿಗೆ ಸೇರಿದ ಸ್ವತ್ತು ಇಲ್ಲ. ಹಾಗಾಗಿ ನಾನು ಖರೀದಿಸಿರುವ ಕ್ರಯ ಪತ್ರದಲ್ಲಿ ಪ್ರತಿವಾದಿಯ ಸ್ವತ್ತಿನ ಕುರಿತು ಉಲ್ಲೇಖ ಮಾಡಿಲ್ಲ. ನನ್ನ ಮತ್ತು ಪ್ರತಿವಾದಿ ಸ್ವತ್ತಿನ ನಡುವೆ ಸರ್ಕರಿ ಓಣಿ ಇದೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ಪ್ರತಿವಾದಿ ಒತ್ತುವರಿ ಮಾಡಿರುವ ಕುರಿತು ಪೊಲೀಸ್ ಠಾಣೆಗೆ ಹಾಗೂ ಪಂಚಾಯಿತಿರವರಿಗೆ ಯಾವುದೇ ದೂರನ್ನು ನೀಡಿಲ್ಲ. ಆದಾಗ್ಯೂ ದೂರನ್ನು ನೀಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಾಲೀಕರಾದ ವೆಂಕಟಶೆಟ್ಟಿರವರು ಸರ್ಕಾರಿ ಓಣಿಯನ್ನು ಒತ್ತುವರಿ ಮಾಡಿಕೊಂಡಿದ್ದು ಸದರಿ ಓಣಿಯನ್ನು ಸಕ್ರಮಗೊಳಿಸಿಕೊಳ್ಳಲು ಸದರಿ ವೆಂಕಟಶೆಟ್ಟಿರವರು ದಾವೆಯನ್ನು ಸಲ್ಲಿಸಿದ್ದು ಆ ನಂತರದಲ್ಲಿ ನಾನು ಈ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ವಾಸ್ತವಾಂಶ ತಿಳಿಯುತ್ತದೆ ಎಂದು ವೆಂಕಟಶೆಟ್ಟಿರವರು ಸಲ್ಲಿಸಿದ್ದ ದಾವೆಯನ್ನು ವಜಾಗೊಳಿಸಿಕೊಂಡಿದ್ದರು ಎಂದರೆ ಸರಿಯಲ್ಲ. ನನ್ನ ಕ್ರಯ ಪತ್ರದ ಪ್ರಕಾರ ನ್ಯಾಯಾಲಯದ ನಿಯೋಗಿಯ ಮೂಲಕ ಅಳತೆ ಮಾಡಿಸಲು ನನ್ನದು ಯಾವುದೇ ತಕರಾರಿಲ್ಲ. ಪ್ರತಿವಾದಿ ತಂದೆ ಪುಟ್ಟೇಗೌಡರು ದಿನಾಂಕ 08.05.1968 ರಂದು ಅವರಿಗೆ ಸೇರಿದ ಸ್ವತ್ತನ್ನು ನೋಂದಣಿ ಕ್ರಯದ ಮೂಲಕ ಪಡೆದುಕೊಂಡು ಸ್ವಾಧೀನದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ಅವರಿಗೆ ಸೇರಿದ ಸ್ವತ್ತನ್ನು ಪಂಚಾಯಿತಿರವರಿಂದ ಅಳತೆ ಮಾಡಿಕೊಂಡಿದ್ದು ಆ ಕುರಿತು ದಾಖಲಾತಿ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮತ್ತು ಪ್ರತಿವಾದಿ ಮನೆಯ ನಡುವೆ ಇರುವ ಓಣಿಯನ್ನು ನನ್ನ ಮಾಲೀಕರಾದ ವೆಂಕಟಶೆಟ್ಟಿರವರು ಅಕ್ರಮವಾಗಿ ಒತ್ತುವರಿ ಮಾಡಿರುವುದನ್ನು ಕಾನೂನು ಬದ್ದಗೊಳಿಸಿಕೊಳ್ಳಲು ಈ ರೀತಿಯಾಗಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಮಧ್ಯಾಹ್ನ 03.00 ಗಂಟೆಗೆ ಮುಂದೂಡಲಾಯಿತು.**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

**ಸಹಿ/-**

**ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ,**
**ನಂಜನಗೂಡು**